ದಿಃ 16.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಡಿ.ಎನ್. ಜಯಮ್ಮ ರವರು ದಿಃ 10.12.2016 ರಂದು ವೀಲು ನಾಮೆಯನ್ನು ಆಕೆಯ ಮಗ ಎಂ.ಎನ್. ನಿರಂಜನ ಎಂಬುವವರಿಗೆ ಬರೆಯುವಂತೆ ಕೋರಿದ್ದು, ನಾನು ಅವರ ಕೋರಿಕೆಯಂತೆ ವೀಲು ನಾಮೆಯನ್ನು ಬರೆದಿದ್ದೇನೆ. ಸದರಿ ವೀಲು ನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಡಿ.2 ಎಂದು ಗುರುತಿಸಲಾಗಿದ್ದು, ನಾನು ಸದರಿ ವೀಲು ನಾಮೆಗೆ ಬರಹಗಾರನಾಗಿ ಸಹಿ ಮಾಡಿದ್ದೇನೆ ಎಂದು ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಡಿ.2(ಎ) ಎಂದು ಗುರುತಿಸಲಾಯಿತು. ಸದರಿ ವೀಲು ನಾಮೆಯಲ್ಲಿ ಇರುವ ಜಯಮ್ಮ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಅದನ್ನು ನಿ.ಡಿ.2(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಬಿ. ಶಿವಾನಂದ ಮತ್ತು ಎಂ.ಡಿ. ಇಂದ್ರೇಶ್ ರವರು ಸಹಿ ಮಾಡಿದ್ದಾರೆ ಎಂದು ಸದರಿ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಡಿ.2(ಸಿ) ಮತ್ತು ನಿ.ಡಿ.2(ಡಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 04.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ</u>

4. ಈ ಕೇಸಿನ ಮೃತ ಪ್ರತಿವಾದಿ ನಿರಂಜನ್ ನನಗೆ ಬಾಲ್ಯದಿಂದಲು ಪರಿಚಯ. ಆತ ನನ್ನ ಶಾಲೆಯಲ್ಲಿ 5 ರಿಂದ 6 ವರ್ಷ ಹಿರಿಯ ವಿದ್ಯಾರ್ಥಿನಿಯಾಗಿದ್ದರು. ನಿರಂಜನ್ ರವರು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ವೀಲು ನಾಮೆಯನ್ನು ಬರೆಸುವಾಗ ನಿರಂಜನ್ ರವರು ಅರಣ್ಯ ಇಲಾಖೆಯಲ್ಲಿಯೇ ಕೆಲಸ ಮಾಡುತ್ತಿದ್ದರು. ಬಾಲ್ಯದಲ್ಲಿ ನಿರಂಜನ್ ರವರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿರಲಿಲ್ಲ. ನನ್ನ ಮತ್ತು ನಿರಂಜನ್ ರವರ ಮನೆ 200 ಮೀಟರ್ ಅಂತರದಲ್ಲಿ ಇದ್ದವು. ನಾನು ಮತ್ತು ನಿರಂಜನ್ ರವರು ಒಂದೇ ಜಾತಿಗೆ ಸೇರಿದ್ದೆವು. ನಿ.ಡಿ.2 ಕ್ಕೆ ಸಹಿ ಮಾಡಿರುವ ಇಂದ್ರೇಶ್ ರವರು ಸಹ ನಮ್ಮ ಜಾತಿಗೆ ಸೇರಿದ್ದಾರೆ. ನಾನು ಈಗ ವೀರಶೈವ ಲಿಂಗಾಯತ ಮಹಾಸಭಾ ಪದಾಧಿಕಾರಿಯಾಗಿದ್ದೇನೆ ಎಂದರೆ ಸರಿ. ವೀರಶೈವ ಲಿಂಗಾಯತ ಮಹಾಸಭಾದಲ್ಲಿ ಇಂದ್ರೇಶ್ ರವರು ಸಹ ಪದಾಧಿಕಾರಿಯಾಗಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ವೀರಶೈವ ಲಿಂಗಾಯತ ಮಹಾಸಭಾದ ಸಭೆ ಸಮಾರಂಭಗಳಿಗೆ ನೀವು ಹಾಜರಾಗುತ್ತೀರಾ ಎಂದರೆ ಸಾಕ್ಷಿ ನನಗೆ ಆಹ್ವಾನ ಇದ್ದಾಗ ನಾನು ಹೋಗುತ್ತೇನೆ ಎಂದು ನುಡಿಯುತ್ತಾರೆ. ಮಹಾಸಭಾದ ಸಭೆ ಸಮಾರಂಭಗಳಿಗೆ ನನಗೆ ಆಹ್ವಾನ ಇದ್ದಾಗ ನಾನು ಹೋದಾಗ ಇಂದ್ರೇಶ್ ರವರು ನನಗೆ ಭೇಟಿಯಾಗಿರಬಹುದು. ನಿರಂಜನ್ ರವರು ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವಾಗ ಕೊಪ್ಪ, ತರೀಕೆರೆ ಮತ್ತು ಚಿಕ್ಕಮಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದರೆ ಇರಬಹುದು.

5. ನಿರಂಜನ್ ರವರು ಚಿಕ್ಕಮಗಳೂರಿನಲ್ಲಿ ಕರ್ತವ್ಯ ನಿರ್ವಹಿಸುವಾಗ ಚಿಕ್ಕಮಗಳೂರಿನಲ್ಲಿ ವಾಸವಿದ್ದರು, ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. ಜಯಮ್ಮ ರವರಿಗೆ ನಿರಂಜನ, ನಿರ್ಮಲಾ ಮತ್ತು ಮಂಜುಳಾ ಎಂಬ 3 ಮಕ್ಕಳು ಎಂದರೆ ಸರಿ. ವಾದಿ ನಿರ್ಮಲಾ ರವರ ಗಂಡನ ಹೆಸರು ಬಸವರಾಜು ಎಂದರೆ ಸರಿ. ಬಸವರಾಜು ರವರು ಮೂಡಿಗೆರೆಯ ಎಂ.ಜಿ.ಎಂ ಆಸ್ಪತ್ರೆಯಲ್ಲಿ

Health Inspector ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಬಸವರಾಜು ರವರು ಎಂ.ಜಿ.ಎಂ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಾದಿಯ ಗಂಡ ಮರಣ ಹೊಂದುವವರೆಗೂ 10 ರಿಂದ 12 ವರ್ಷ ಮೂಡಿಗೆರೆ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಎಷ್ಟು ವರ್ಷ ಅಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಸವರಾಜು ರವರು ಮೂಡಿಗೆರೆಯಲ್ಲಿ ಕೆಲಸ ಮಾಡುವಾಗ ಮೂಡಿಗೆರೆಯಲ್ಲಿ ಆತನ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವರಾಜ್ ಮತ್ತು ಆತನ ಹೆಂಡತಿ ಮಕ್ಕಳು ಜಯಮ್ಮ ರವರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸುಳ್ಳು. ಜಯಮ್ಮ ರವರ ಯೋಗಕ್ಷೇಮವನ್ನು ವಾದಿ, ಆಕೆಯ ಗಂಡ ಮತ್ತು ಮಕ್ಕಳು ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನಮ್ಮ ಮನೆ ಜಯಮ್ಮ ರವರ ಮನೆಯಿಂದ 200 ಮೀಟರ್ ಅಂತರದಲ್ಲಿ ಇದ್ದ ಕಾರಣ ಜಯಮ್ಮ ರವರನ್ನು ವಾದಿ, ಆಕೆಯ ಗಂಡ ಮತ್ತು ಮಕ್ಕಳು ನೋಡಿಕೊಳ್ಳುತ್ತಿದ್ದ ವಿಚಾರ ನನಗೆ ತಿಳಿದಿತ್ತು ಎಂದರೆ ಸುಳ್ಳು. ನಮ್ಮ ಮನೆ ಮತ್ತು ಜಯಮ್ಮ ರವರ ಮನೆ ಕೆ.ಎಂ. ರಸ್ತೆಯ ಪೂರ್ವ ಮತ್ತು ಪಶ್ಚಿಮಕ್ಕೆ ಅಭಿಮುಖವಾಗಿದ್ದವು ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಕೆ.ಎಂ. ರಸ್ತೆ ಇದೆ ಎಂದರೆ ಸರಿ. ಜಯಮ್ಮನ ಮನೆಯ ಪೂರ್ವಕ್ಕೆ ಕೆ.ಎಂ. ರಸ್ತೆ ಇದೆ ಎಂದರೆ ಸರಿ.

6. ನಾನು ಕಸಬಾ ಹೋಬಳಿಯಲ್ಲಿ ಕಂದಾಯ ಅಧಿಕಾರಿ ಆಗಿದೆ ಎಂದರೆ ಸಾಕ್ಷಿ ಗೋಣಿಬೀಡಿನಲ್ಲಿ ನಾನು ಕಂದಾಯ ಅಧಿಕಾರಿಯಾಗಿದ್ದೆ ಎಂದು ನುಡಿಯುತ್ತಾರೆ. ನಾನು ಮೂಡಿಗೆರೆ ವ್ಯಾಪ್ತಿಯ ಹೆಸ್ಗಲ್, ಬಿಳಗುಳ, ಮೂಡಿಗೆರೆ ಗ್ರಾಮಾಂತರ ಪ್ರದೇಶದಲ್ಲಿ ಕಂದಾಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿಲ್ಲ. ನಮ್ಮ ಮನೆಯಿಂದ ನ್ಯಾಯಾಲಯ ಮೂಡಿಗೆರೆ ಆಸ್ಪತ್ರೆಗೆ ಮತ್ತು ಚಿಕ್ಕಮಗಳೂರಿಗೆ ಹೋಗಬೇಕಾದರೆ ಜಯಮ್ಮ ರವರ ಮನೆಯ ಮುಂಭಾಗದಿಂದಲೇ ಬರಬೇಕಾಗುತ್ತದೆ ಎಂದರೆ ಸರಿ. ಜಯಮ್ಮ ಮತ್ತು ಅವರ ಮನೆಯವರು ಬಸ್

ನಿಲ್ದಾಣ, ಪಟ್ಟಣ ಪಂಚಾಯಿತಿಗೆ ಹೋಗಬೇಕಾದರೆ ನಮ್ಮ ಮನೆಯ ಮುಂಭಾಗದಿಂದಲೇ ಹೋಗಬೇಕು ಎಂದರೆ ಸರಿ. ಆ ಕಾರಣದಿಂದ ವಾದಿ ಆಕೆಯ ಗಂಡ ಮತ್ತು ಮಕ್ಕಳು ಜಯಮ್ಮನೊಂದಿಗೆ ವಾಸವಿರುವ ವಿಚಾರ ನನಗೆ ತಿಳಿದಿದ್ದರು ಸಹ ವಾಸವಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಯಮ್ಮ ರವರ ಮನೆಗೆ ಅವರ ಆರೋಗ್ಯ ಸರಿ ಇಲ್ಲದಾಗ ಹೋಗುತ್ತಿದ್ದೆ. ನಾನು ಜಯಮ್ಮ ರವರ ಮನೆಗೆ 2 ರಿಂದ 3 ಬಾರಿ ಹೋಗಿರಬಹುದು. ಜಯಮ್ಮ ರವರ ಮನೆಯಲ್ಲಿ 2 ಪೋರ್ಶನ್ ಇದ್ದವು. ಜಯಮ್ಮ ರವರ ಒಂದು ಮನೆಯಲ್ಲಿ ವಾಸವಿದ್ದು, ಇನ್ನೊಂದು ಮನೆಯನ್ನು ಬಾಡಿಗೆಗೆ ನೀಡಿದ್ದರು. ಜಯಮ್ಮ ರವರ ಮನೆಯಲ್ಲಿ ಬಾಡಿಗೆ ಇದ್ದವರ ಮನೆಗೆ ನಾನು ಹೋಗಿಲ್ಲ. ಸುಮಾರು 20 ರಿಂದ 30 ವರ್ಷಗಳಿಂದ ಜಯಮ್ಮ ರವರು 2 ಮನೆಗಳನ್ನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ 2 ಮನೆಗಳು ಇದ್ದವು ಎಂದು ನುಡಿಯುತ್ತಾರೆ.

7. ಜಯಮ್ಮ ರವರು ಮೃತಪಟ್ಟ ಬಳಿಕ ನಿ.ಡಿ.2 ವೀಲು ನಾಮೆಯಲ್ಲಿ ನಮೂದಿಸಿರುವ ಆಸ್ತಿಯ ಖಾತೆ ಮೃತ ನಿರಂಜನ್ ರವರ ಹೆಸರಿನಲ್ಲಿ ಆಗಿರಬಹುದು. ನಿ.ಡಿ.2 ಆಗುವ ಮೊದಲು ಬರೆದಿರುವ ವೀಲು ನಾಮೆಯ ಬಗ್ಗೆ ನಿ.ಡಿ.2 ರಲ್ಲಿ ಬರೆಯಲಾಗಿರುತ್ತದೆ. ನಿ.ಡಿ.2 ಆಗುವ ಮೊದಲು ಆದ ವೀಲು ನಾಮೆ ಯಾವ ಇಸವಿಯಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಮೃತ ನಿರಂಜನ್ ರವರಿಗೆ ಹೆಸರಿಗೆ ದಾವ ಸ್ವತ್ತಿನ ಖಾತೆ ದಿಃ 09.05.2001 ರಂದು ಆಗಿದೆ ಎಂದರೆ ಆಗಿರಬಹುದು. ಮೃತ ನಿರಂಜನ್ ರವರ ಹೆಸರಿಗೆ ದಿಃ 09.05.2001 ರಂದೇ ದಾವ ಸ್ವತ್ತಿನ ಖಾತೆಯಾಗಿದ್ದು, ನಿ.ಡಿ.2 ರ ಪ್ರಕಾರ ಖಾತೆ ನಿರಂಜನ್ ರವರ ಹೆಸರಿಗೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಮೃತ ನಿರಂಜನ್ ಶಾಲಾ ಸಹಪಾಟಿಗಳು ಮತ್ತು ತುಂಬಾ ಆತ್ಮೀಯರು ಎಂದರೆ ಸುಳ್ಳು. ನಿರಂಜನ್ ರವರು ಚಿಕ್ಕಮಗಳೂರಿನಿಂದ ಮೂಡಿಗೆರೆಗೆ ಬಂದರೆ ಆತನ ತಾಯಿಯ ಮನೆಗೆ ಹೋಗುತ್ತಿರಲಿಲ್ಲ, ನಮ್ಮ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದರು ಎಂದರೆ ಸುಳ್ಳು. ಆ ಕಾರಣದಿಂದಲೇ ಆತನಿಗೆ ಸಹಾಯ ಮಾಡಲು ನಿ.ಡಿ.2 ಅನ್ನು ನಾನು

ಸೃಷ್ಟಿಸಿದ್ದೇನೆ ಎಂದರೆ ಸುಳ್ಳು. ವಾದಿ ತನ್ನ ಹೆಸರಿಗೆ ಜಯಮ್ಮ ರವರು ಬರೆದುಕೊಟ್ಟ ದಿಃ 03.12.2016 ರ ವೀಲು ನಾಮೆ ಇದೆ ಎಂದು ಈ ದಾವೆಯಲ್ಲಿ ಹಾಜರು ಪಡಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ವಿಚಾರ ತಿಳಿದ ಬಳಿಕ ನಾನು ಮತ್ತು ನಿರಂಜನ್ ಸೇರಿಕೊಂಡು ನಿ.ಡಿ.2 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ಕಾನೂನಿನಲ್ಲಿ ಕೊನೆಯ ವೀಲು ನಾಮೆಗೆ ಬೆಲೆ ಇರುವುದರಿಂದ ನಿ.ಡಿ.2 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

8. ದಿಃ 09.05.2001 ರ ವೀಲು ನಾಮೆಯ ಪ್ರಕಾರ ದಾವ ಆಸ್ತಿಗಳನ್ನು ನಿರಂಜನ್ ಮತ್ತು ಆತನ ಮಗನಿಗೆ ಎಂದು ಬರೆಯಲಾಗಿತ್ತು. ದಿಃ 09.05.2001 ರ ರಿಜಿಸ್ಟರ್ ವೀಲು ಇದ್ದ ಕಾರಣ ನಿ.ಡಿ.2 ಅನ್ನು ಬರೆಯುವ ಸಂದರ್ಭವೇ ಇರಲಿಲ್ಲ ಎಂದರೆ ಸಾಕ್ಷಿ ನಿರಂಜನ್ ರವರ ಮಗ ಸತೀಶ್ ರವರು ತೀರಿಕೊಂಡಿದ್ದರಿಂದ ನಿ.ಡಿ.2 ಅನ್ನು ತಯಾರಿಸಿದ್ದೇವೆ ಎಂದು ನುಡಿಯುತ್ತಾರೆ. ನಿರಂಜನ್ ರವರ ಮಗ ಸತೀಶ್ ರವರಿಗೆ ಮದುವೆಯಾಗಿರಲಿಲ್ಲ, ನಿರಂಜನ್ ಮಾತ್ರ ಸತೀಶ್ ರವರ ವಾರಸುದಾರ ಎಂದರೆ ಸರಿ. ಆ ಕಾರಣದಿಂದ ನಿ.ಡಿ.2 ಅನ್ನು ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಿ.ಡಿ.2 ಅನ್ನು ಬರೆಯುವಾಗ ದಾವ ಸ್ವತ್ತಿನ ದಾಖಲೆಗಳನ್ನು ಜಯಮ್ಮ ರವರು ತೋರಿಸಿದ್ದರು. ನಿ.ಡಿ.2 ಅನ್ನು ಬರೆಯುವಾಗ ಪಟ್ಟಣ ಪಂಚಾಯಿತಿಯ ಅಸೆಸ್ಮೆಂಟ್ ದಾಖಲೆ ಮತ್ತು ಸರ್ವೆ ನಂಬರ್ 10 ರ ಪಹಣಿಯನ್ನು ನೀಡಿದ್ದರು. ಅಸೆಸ್ಮೆಂಟ್ ದಾಖಲೆಯಲ್ಲಿ ಕರ ನಿರ್ಧಾರಣೆ ಎಂದು ಬರೆಯಲಾಗಿತ್ತು. ನಿ.ಡಿ.2 ಬರೆಯುವಾಗ ನಿ.ಡಿ.9 ಇ-ಸ್ವತ್ತನ್ನು ಜಯಮ್ಮ ರವರು ನನಗೆ ತೋರಿಸಿರಲಿಲ್ಲ. 2015-2016 ನೇ ಸಾಲಿನ ಪಹಣಿಯನ್ನು ನನಗೆ ತೋರಿಸಿದ್ದರು. ಆ ಸಮಯದಲ್ಲಿ 2 ದಾಖಲೆಗಳನ್ನು ಹೊರತುಪಡಿಸಿ ಕಂದಾಯ ಪಾವತಿಸಿದ ರಸೀದಿಗಳನ್ನು ತೋರಿಸಿದ್ದರು. ಎರಡೂ ಸ್ವತ್ತಿಗೆ ಪಾವತಿಸಿದ ಕಂದಾಯದ ರಸೀದಿಗಳನ್ನು ತೋರಿಸಿದ್ದರು. ನಿ.ಡಿ.2 ಅನ್ನು ಬರೆಯುವ ಮೊದಲು ದಾವ ಸ್ವತ್ತುಗಳನ್ನು ನಾನು ಅಳತೆ ಮಾಡಿಸಲಿಲ್ಲ. ನಿ.ಡಿ.2 ರಲ್ಲಿ ಜಮೀನಿನ ಚಕ್ಕುಬಂದಿಯನ್ನು ಬರೆದಿದ್ದೇನೆ. ಈ ಹಿಂದೆ ರಿಜಿಸ್ಟರ್ ವೀಲು ನಾಮೆಯನ್ನು

ಬರೆದಿದ್ದೀರಿ, ಅದೇ ರೀತಿ ರಿಜಿಸ್ಟರ್ ವೀಲು ನಾಮೆಯನ್ನು ಬರೆಸಿರಿ ಎಂದು ನೀವು ಜಯಮ್ಮ ರವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಅವರ ಅಭಿಪ್ರಾಯದಂತೆ ನಿ.ಡಿ.2 ಅನ್ನು ಬರೆದಿದ್ದೇನೆ ಎಂದು ನುಡಿಯುತ್ತಾರೆ. ಜಯಮ್ಮ ರವರ ಮನೆಯಿಂದ ಮೂಡಿಗೆರೆಯ ಸಬ್ ರಿಜಿಸ್ಟರ್ ಕಚೇರಿ 400 ಮೀಟರ್ ಅಂತರದಲ್ಲಿ ಇದೆ. ಜಯಮ್ಮ ರವರ ಮನೆಯಿಂದ ಸಬ್ ರಿಜಿಸ್ಟರ್ ಕಚೇರಿಗೆ ಹೋಗಲು ಆಟೋದ ವ್ಯವಸ್ಥೆ ಇತ್ತು ಎಂದರೆ ಸರಿ. ನಿ.ಡಿ.2 ಅನ್ನು ತಯಾರಿಸುವಾಗ ಜಯಮ್ಮ ರವರು ನಡೆದಾಡುವ ಸ್ಥಿತಿಯಲ್ಲಿ ಇದ್ದರು ಎಂದರೆ ಸರಿ.

10. ನಮ್ಮ ಮನೆಯ ಬಳಿ ಶನಿಮಹಾತ್ಮ ದೇವಸ್ಥಾನ ಇದೆ ಎಂದರೆ ಸರಿ. ಆ ದೇವಸ್ಥಾನಕ್ಕೆ ಜಯಮ್ಮ ರವರು ಬರುತ್ತಿದ್ದರು ಎಂದರೆ ಸಾಕ್ಷಿ ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಜಯಮ್ಮ ರವರ ಮನೆಯಿಂದ 200 ಅಡಿ ಅಂತರದಲ್ಲಿ ಬಸವೇಶ್ವರ ದೇವಸ್ಥಾನ ಇದೆ ಎಂದರೆ ಸರಿ. ನಿ.ಡಿ.2 ಅನ್ನು ಬರೆಯುವ ಮೊದಲು ಅಥವ ನಂತರ ಬಸವೇಶ್ವರ ದೇವಸ್ಥಾನದಲ್ಲಿ ಜಯಮ್ಮ ರವರನ್ನು ನಾನು ನೋಡಿಲ್ಲ. ನಿ.ಡಿ.2 ಅನ್ನು ಜಯಮ್ಮ ರವರ ಮನೆಯಲ್ಲಿಯೇ ತಯಾರಿಸಿದ್ದೆ. 2 ದಿನಗಳ ಮುಂಚೆ ವೀಲು ನಾಮೆಯನ್ನು ಬರೆಯುವಂತೆ ಜಯಮ್ಮ ರವರು ನನಗೆ ತಿಳಿಸಿದ್ದರು. ಕಂದಾಯ ಇಲಾಖೆಯಲ್ಲಿ ನಾನು 30 ವರ್ಷ ಕೆಲಸ ಮಾಡಿದ್ದೇನೆ. ನಿ.ಡಿ.2 ಅನ್ನು ತಯಾರಿಸುವಾಗ ನಾನು ಕಂದಾಯ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಖಾತೆಯನ್ನು ಮಾಡುವ ಮೊದಲು ಆಸ್ತಿಯನ್ನು ಬರೆದುಕೊಟ್ಟವರಿಗೆ ಆಸ್ತಿ ಯಾವ ರೀತಿ ಬಂತು ಎಂದು ತಿಳಿದುಕೊಳ್ಳಬೇಕು ಎಂಬ ಮಾಹಿತಿ ನನಗೆ ಇದೆ ಎಂದರೆ ಸರಿ. ನಿ.ಡಿ.2 ರಲ್ಲಿ ಜಯಮ್ಮ ರವರಿಗೆ 1 ಆಸ್ತಿ ಆಕೆಯ ತಂದೆಯ ಕಡೆಯಿಂದ ಬಂದಿದೆ, ಇನ್ನೊಂದು ಆಸ್ತಿಯನ್ನು ಆಕೆ ಖರೀದಿಗೆ ಪಡೆದಿದ್ದಾರೆ ಎಂದು ಬರೆದಿದ್ದೇನೆ. ಜಯಮ್ಮ ರವರಿಗೆ ಒಂದು ಆಸ್ತಿ ತಂದೆಯಿಂದ ಪತ್ರದ ಮೂಲಕ ಬಂದಿತ್ತು. ಯಾವ ಪತ್ರದ ಮೂಲಕ ಜಯಮ್ಮ ರವರಿಗೆ ಒಂದು ಆಸ್ತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

11. ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ನಿ.ಡಿ.2 ಅನ್ನು ನಿರಂಜನ್ ರವರ ಹೆಸರಿಗೆ ಸೃಷ್ಟಿಸಿದ ಕಾರಣ ಜಯಮ್ಮ ರವರಿಗೆ ಆಸ್ತಿ ಯಾವ

ದಾಖಲೆಗಳ ಮೂಲಕ ಬಂದಿತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ಸುಳ್ಳು.

12. ನಾನು ದಾವ ಐಟಂ ನಂಬರ್ ಎ ಮತ್ತು ಬಿ ಆಸ್ತಿಗಳನ್ನು ಹೊರತುಪಡಿಸಿ ಜಯಮ್ಮ ರವರಿಗೆ ಸೇರಿದ ಇತರೆ ಯಾವುದೇ ಆಸ್ತಿಗೆ ಸಂಬಂಧಿಸಿದಂತೆ ನೀವು ವೀಲು ನಾಮೆಯನ್ನು ಬರೆದಿದ್ದೀರಾ ಎಂದರೆ ಸಾಕ್ಷಿ ಬರೆದಿಲ್ಲ ಎಂದು ನುಡಿದು ಪುನಃ ಚಿಕ್ಕಮಗಳೂರಿನ ನಿರಂಜನ್ ರವರಿಗೆ ಸೇರಿದ ಆಸ್ತಿಯನ್ನು ನಿ,ಡಿ.2 ರಲ್ಲಿ ಕಾಣಿಸಿದ್ದೇನೆ ಎಂದು ನುಡಿಯುತ್ತಾರೆ. ಚಿಕ್ಕಮಗಳೂರಿನಲ್ಲಿ ಇರುವ ಆಸ್ತಿ ನಿರಂಜನ್ ರವರ ಹೆಸರಿನಲ್ಲಿಯೇ ಖಾತೆ ಇತ್ತು. ಚಿಕ್ಕಮಗಳೂರಿನಲ್ಲಿ ಇದ್ದ ಆಸ್ತಿಯ ಉದ್ದ ಮತ್ತು ಅಗಲವನ್ನು ಹೇಳಲು ಆಗುವುದಿಲ್ಲ. ಆ ಆಸ್ತಿ ಮನೆಯಾಗಿತ್ತು. ಚಿಕ್ಕಮಗಳೂರಿನ ಆಸ್ತಿ ಜಯಮ್ಮ ರವರಿಗೆ ಆಕೆಯ ಗಂಡನಿಂದ ಬಂದಿತ್ತು. ಜಯಮ್ಮ ರವರಿಗೆ ಆಕೆಯ ಗಂಡನಿಂದ ಚಿಕ್ಕಮಗಳೂರಿನ ಆಸ್ತಿ ಪೌತಿ ಖಾತೆಯ ಮೂಲಕ ಬಂದಿತ್ತು. ನಿರಂಜನ್ ರವರಿಗೆ ಚಿಕ್ಕಮಗಳೂರಿನಲ್ಲಿ ಇರುವ ಆಸ್ತಿ ಜಯಮ್ಮ ರವರ ಮೂಲಕ ಪೌತಿ ತಖ್ತೆ ಮೂಲಕ ಬಂದಿರುತ್ತದೆ. ಜಯಮ್ಮ ರವರು ನಿ.ಡಿ.2 ಅನ್ನು ತಯಾರಿಸುವಾಗ ಚಿಕ್ಕಮಗಳೂರಿನ ಆಸ್ತಿ ಯಾವ ರೀತಿ ಯಾರ ಹೆಸರಿಗೆ ಬಂದಿದೆ ಮತ್ತು ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ತಿಳಿಸಿದ್ದರು. ಚಿಕ್ಕಮಗಳೂರಿನ ಆಸ್ತಿ ಯಾವ ರೀತಿ ಬಂದಿತ್ತು ಎಂದು ನಿ.ಡಿ.2 ರಲ್ಲಿ ಬರೆದ್ದೀರಾ ಎಂದರೆ ಸಾಕ್ಷಿ ದಾಖಲೆಯನ್ನು ತೋರಿಸಿದರೆ ಹೆಳಬಲ್ಲೆ ಎಂದು ನುಡಿಯುತ್ತಾರೆ. ನಿ.ಡಿ.2 ರಲ್ಲಿ ಚಿಕ್ಕಮಗಳೂರಿನ ಆಸ್ತಿಯ ವಿವರವನ್ನು ಬರೆದಿದ್ದೇನೆ.

13. ದಾವ ಎ ಶೆಡ್ಯೂಲ್ ಆಸ್ತಿಯ ಮ್ಯುಟೇಷನ್ ದಾಖಲೆಯನ್ನು ನಾನು ನೋಡಿಲ್ಲ. ದಾವ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳ ಮ್ಯುಟೇಷನ್ ದಾಖಲೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ದಾವ ಬಿ ಶೆಡ್ಯೂಲ್ ಆಸ್ತಿಯ ಮ್ಯುಟೇಷನ್ ದಾಖಲೆಯನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆಯನ್ನು ನೋಡದರೆ ಜಯಮ್ಮ ರವರಿಂದ ಯಾವುದೇ ಮಾಹಿತಿ ಪಡೆಯದೇ ಜಯಮ್ಮ ರವರ ಒಪ್ಪಿಗೆ ಇಲ್ಲದೇ ನಿ.ಡಿ.2 ಅನ್ನು ನಿರಂಜನ್ ರವರಿಗೆ ಸಹಾಯ ಮಾಡಲು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಜಯಮ್ಮ ರವರ ತಂದೆ ಜಯಮ್ಮ ರವರಿಗೆ ವೀಲು ನಾಮೆ ಮೂಲಕ ಯಾವುದೇ ಆಸ್ತಿಯನ್ನು ನೀಡಿಲ್ಲ, ಜಯಮ್ಮ ರವರ ತಂದೆ ಆತನ ಮೊಮ್ಮಕಳು ಆದ ನಿರ್ಮಲಾ, ನಿರಂಜನಾ ಮತ್ತು ಮಂಜುಳಾ ರವರಿಗೆ ಮೂಡಿಗೆರೆ ತಾಲ್ಲೂಕಿನ ಆಸ್ತಿಗಳನ್ನು ವೀಲು ಮೂಲಕ ನೀಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ವೀಲು ನಾಮೆಯಲ್ಲಿ ಜಯಮ್ಮ ರವರ ತಂದೆ ಆಕೆಯನ್ನು ಪೋಷಕರಾಗಿ ನಮೂದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವ ಎ ಶೆಡ್ಯೂಲ್ ಗೆ ಸಂಬಂಧಿಸಿದಂತೆ ವೀಲು ನಾಮೆಯನ್ನು ಬರೆಯುವ ಅಧಿಕಾರ ಜಯಮ್ಮ ರವರಿಗೆ ಇಲ್ಲ ಎಂದು ತಿಳಿದಿದ್ದರು ಸಹ ನಿ.ಡಿ.2 ಅನ್ನು ನಿರಂಜನ್ ರವರಿಗೆ ಸಹಾಯ ಮಾಡಲು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

14. ಜಯಮ್ಮನ ಗಂಡ ನಾಗಪ್ಪ ತೀರಿಕೊಂಡ ಬಳಿಕ ದಾವ ಸಿ ಶೆಡ್ಯೂಲ್ ಆಸ್ತಿ ನಿರ್ಮಲಾ, ನಿರಂಜನಾ ಮತ್ತು ಮಂಜುಳಾ ಮತ್ತು ಜಯಮ್ಮ ರವರಿಗೆ ಸೇರಬೇಕಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಾನು ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿದ್ದಗೆ ನನಗೆ ಆ ಬಗ್ಗೆ ಮಾಹಿತಿ ಇರುತ್ತಿತ್ತು ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ಪರಿಶೀಲಿಸಿಯೇ ನಿ.ಡಿ.2 ಅನ್ನು ತಯಾರಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಮೂಲ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ಜಯಮ್ಮ ಮತ್ತು ಆಕೆಯ ಮಕ್ಕಳಿಗೆ ಜಂಟಿ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ಜಯಮ್ಮ ಮತ್ತು ಆಕೆಯ ಮಕ್ಕಳಿಗೆ ಜಂಟಿ ಹಕ್ಕ ಇದ್ದ ಕಾರಣ ಜಯಮ್ಮ ರವರಿಗೆ ನಿರಂಜನಾ ಒಬ್ಬರ ಹೆಸರಿಗೆ ವೀಲು ನಾಮೆಯನ್ನು ಬರೆಯುವ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ತಿಳಿದಿದ್ದರು ಸಹ ನಿ.ಡಿ.2 ರಲ್ಲಿ ದಾವ ಸಿ ಶೆಡ್ಯೂಲ್ ಸ್ವತ್ತನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

15. ನಾನು ಕಂದಾಯ ನಿರೀಕ್ಷಕನಾಗಿ ಕೆಲಸ ನಿರ್ವಹಿಸುತ್ತಿರುವಾಗ ಮಹಜರ್ ಮತ್ತು ವರದಿಗಳನ್ನು ತಯಾರಿಸುವ ಕೆಲಸಗಳನ್ನು ಮಾಡಿದ್ದೇನೆ ಎಂದರೆ ಸರಿ. ನಾನು ಸಾಕಷ್ಟು ದಸ್ತವೇಜುಗಳಿಗೆ ಸಹಿಗಳನ್ನು ಹಾಕಿದ್ದೇನೆ ಎಂದರೆ ಹಾಕಿಲ್ಲ. ನಾನು ಯಾವುದೇ ರಿಜಿಸ್ಟರ್ ಪತ್ರಗಳಿಗೆ ಸಹಿ ಹಾಕಿಲ್ಲ. ನಾನು ಯಾವುದೇ

ವಹಿವಾಟಿನ ದಾಖಲೆಗಳನ್ನು ಬರೆದಿಲ್ಲ. ನಾನು ನನ್ನ ಆಸ್ತಿಗಳಿಗೆ ಸಂಬಂಧಿಸಿದ ಪತ್ರಗಳನ್ನು ತಯಾರಿಸಿಲ್ಲ. ನಾನು ನನ್ನ ಹೆಸರಿಗೆ ಕ್ರಯ ಪತ್ರದ ಅಡಿ ಆಸ್ತಿಗಳನ್ನು ಖರೀದಿಸಿಲ್ಲ. ನನ್ನ ಮಗನ ಹೆಸರಿಗೆ ಕ್ರಯ ಪತ್ರದ ಅಡಿ 5 ಎಕರೆ ಜಮೀನನ್ನು ಖರೀದಿಸಿದ್ದೇನೆ. ನಾನು ಕಂದಾಯ ನಿರೀಕ್ಷಕನಾಗಿ ಕೆಲಸ ಮಾಡುವಾಗ ಜನರು ಕ್ರಯ ಪತ್ರ, ದಾನ ಪತ್ರ ಮತ್ತು ಇತರೆ ದಸ್ತುವೇಜುಗಳನ್ನು ಹಾಜರು ಪಡಿಸುತ್ತಿದ್ದರು ಎಂದರೆ ಸರಿ. ಆ ದಸ್ತವೇಜುಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.

16. ದಾಖಲೆಯನ್ನು ಬರೆಯುವಾಗ ಮೊದಲ ಪುಟದ ಮೇಲ್ಭಾಗದಲ್ಲಿ ಸ್ವಲ್ಪ ಜಾಗವನ್ನು ಬಿಡುತ್ತಾರೆ ಮತ್ತು ಪುಟದ 2 ಬದಿಯಲ್ಲಿ ಜಾಗವನ್ನು ಬಿಡುತ್ತಾರೆ ಎಂದರೆ ಸಾಕ್ಷಿ ಬಿಡಬಹುದು, ಬಿಡದೇ ಬರೆಯಬಹುದು ಎಂದು ನುಡಿಯುತ್ತಾರೆ. ಕ್ರಯ ಪತ್ರ, ದಾನ ಪತ್ರ ಇತರೆ ದಾಖಲೆಗಳಿಗೆ ಪ್ರತಿ ಪುಟಕ್ಕೂ ಸಹಿ ಮಾಡುವ ಬಗ್ಗೆ ನಿಮಗೆ ತಿಳಿದಿದೆಯಾ ಎಂದರೆ ಸಾಕ್ಷಿ ರಿಜಿಸ್ಟರ್ ಪತ್ರಗಳಿಗೆ ಆ ರೀತಿ ಪ್ರತಿ ಪುಟಕ್ಕೂ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ತಯಾರಿಸಿರುವ ನಿ.ಡಿ.2 ರ ಮೇಲ್ಭಾಗದಲ್ಲಿ, ಕೆಳಭಾಗದಲ್ಲಿ, ಎಡ ಮತ್ತು ಬಲಬದಿಯಲ್ಲಿ ಮಾರ್ಜಿನ್ ಗಳನ್ನು ಬಿಟ್ಟಿಲ್ಲ ಎಂದರೆ ಸಾಕ್ಷಿ ಎಡಭಾಗದಲ್ಲಿ ಮಾರ್ಜಿನ್ ಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿ.ಡಿ.2 ರ ಮೊದಲ ಪುಟದ ಅಂಚಿನಲ್ಲಿ ಬರೆದಿದ್ದೇನೆ ಎಂದರೆ ಸರಿ.ನಿ.ಡಿ.2 ರ ಮೊದಲನೇ ಪುಟದಲ್ಲಿ ಸಹಿ ಇಲ್ಲ ಎಂದರೆ ಸರಿ. ನಿ.ಡಿ.2 ರಲ್ಲಿ ಪುಟಗಳ ಸಂಖ್ಯೆಯನ್ನು ಬರೆದಿಲ್ಲ ಎಂದರೆ ಸಾಕ್ಷಿ ಒಂದೇ ಹಾಳೆಯಾದ ಕಾರಣ ಸಂಖ್ಯೆಯನ್ನು ಬರೆದಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ರ 2 ನೇ ಪುಟದ ಮೇಲ್ಭಾಗದಲ್ಲಿ ಸ್ವಲ್ಪವು ಮಾರ್ಜಿನ್ ಬಿಡದೇ ಬರೆದಿದ್ದೇನೆ ಎಂದರೆ ಸರಿ. 2 ನೇ ಪುಟದ ಬಲಭಾಗದಲ್ಲಿಯು ಯಾವುದೇ ಮಾರ್ಜಿನ್ ಬಿಟ್ಟಿಲ್ಲ ಎಂದರೆ ಸರಿ.

17. ಜಯಮ್ಮ ರವರು pension ಪಡೆಯುತ್ತಿದ್ದರು ಎಂದರೆ ಸರಿ. Pension ಪಡೆಯುವವರ pension ಅನ್ನು ಆಗಾಗ ಹೆಚ್ಚಿಸುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ pension ಪಡೆಯುವವರು ಹೆಚ್ಚಿನ

pension ಪಡೆಯಲು ಅರ್ಜಿಯನ್ನು ನೀಡಬೇಕಾಗುತ್ತದೆ ಎಂದರೆ ಸರಿ. ಜಮೀನಿನ ಖಾತೆಯನ್ನು ಮಾಡಬೇಕಾದರೆ ಅರ್ಜಿ ನೀಡಬೇಕಾಗುತ್ತದೆ ಎಂದರೆ ಸರಿ. ನನಗೆ ಜಯಮ್ಮ ಸಂಬಂಧಿಕರಲ್ಲ. ಜಯಮ್ಮ ರವರು ನಮ್ಮ ಜಾತಿಯವರು ಆದ ಕಾರಣ ಮತ್ತು ಆಕೆಯ ಮಗ ನಿರಂಜನ ನನ್ನ ಸ್ನೇಹಿತನಾದ ಕಾರಣ, ನಮ್ಮ ಮನೆ ಆಕೆಯ ಮನೆಗೆ ಹತ್ತಿರ ಇದ್ದ ಕಾರಣ ಜಯಮ್ಮ ರವರು pension ಪಡೆಯಲು ಮತ್ತು ಖಾತೆ ಬದಲಾವಣೆ ಮಾಡಿಸಲು ಅರ್ಜಿಯನ್ನು ಬರೆಸಲು ನನ್ನ ಬಳಿ ಬರುತ್ತಿದ್ದರು ಎಂದರೆ ಸುಳ್ಳು. ನಾನು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನನಗೆ ಹೆಚ್ಚಿನ ಮಾಹಿತಿ ಇದೆ ಎಂದು ಜಯಮ್ಮ ರವರು ನನ್ನ ಬಳಿ ಮಾಹಿತಿ ಕೋರಿ ಬರುತ್ತಿದ್ದರು ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ಅರ್ಜಿಯನ್ನು ಬರೆದು ನಾನೇ ಸಲ್ಲಿಸುತ್ತೇನೆ ಎಂದು ಖಾಲಿ ಕಾಗದಗಳಿಗೆ ಜಯಮ್ಮ ರವರ ಸಹಿಗಳನ್ನು ಪಡೆಯುತ್ತಿದ್ದೆ ಎಂದರೆ ಸುಳ್ಳು. ಜಯಮ್ಮ ರವರ ಜೊತೆ ನನಗೆ ಮಾತುಕತೆ ಇತ್ತು. ಜಯಮ್ಮ ರವರಿಂದ ಖಾಲಿ ಕಾಗದಗಳಿಗೆ ಪಡೆದ ಸಹಿಯನ್ನು ದುರುಪಯೋಗ ಪಡಿಸಿಕೊಂಡು ನಿ.ಡಿ.2 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸುಳ್ಳು. ಖಾಲಿ ಕಾಗದದಲ್ಲಿ ಇರುವ ಸಹಿಗೆ ಹೊಂದಾಣಿಕೆಯಾಗಬೇಕು ಎಂಬ ಕಾರಣದಿಂದ ನಾನು ನಿ.ಡಿ.2 ರಲ್ಲಿ ಮಾರ್ಜಿನ್ ಗಳನ್ನು ಬಿಡದೆ ಹೊಂದಾಣಿಕೆ ಆಗುವಂತೆ ನಿ.ಡಿ.2 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸುಳ್ಳು. ಆ ಕಾರಣದಿಂದಲೇ ನಿ.ಡಿ.2 ರ ಪ್ರಥಮ ಪುಟದಲ್ಲಿ ಜಯಮ್ಮ ರವರ ಸಹಿಯನ್ನು ಪಡೆದಿಲ್ಲ ಎಂದರೆ ಸುಳ್ಳು. ಆ ಕಾರಣದಿಂದಲೇ ನಿ.ಡಿ.2 ರ ಪ್ರಥಮ ಪುಟದಲ್ಲಿ ಅಕ್ಷರಗಳು ಒತ್ತೊತ್ತಾಗಿ ಮತ್ತು ಸಣ್ಣ ಅಕ್ಷರದಿಂದ ಕೂಡಿವೆ, 2 ನೇ ಪುಟದಲ್ಲಿ ಆ ರೀತಿ ದೊಡ್ಡ ಅಕ್ಷರಗಳಿಂದ ಕೂಡಿವೆ, ಒತ್ತೊತ್ತಾಗಿ ಇಲ್ಲ ಎಂದರೆ ಸರಿಯಲ್ಲ. ಜಯಮ್ಮ ರವರು ವೀಲು ನಾಮೆಯನ್ನು ಬರೆಯುವಂತೆ ನನಗೆ ತಿಳಿಸಿಲ್ಲ, ನಿ.ಡಿ.2 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

18. ನಿ.ಡಿ.2 ರಲ್ಲಿ ಜಯಮ್ಮ ರವರ ಹೆಣ್ಣು ಮಕ್ಕಳು ಎಲ್ಲಿ ವಾಸವಿದ್ದಾರೆ ಎಂದು ಬರೆದಿಲ್ಲ, ಹೆಸರುಗಳನ್ನು ಬರೆದಿದ್ದೇನೆ. ನಿ.ಡಿ.2 ರಲ್ಲಿ ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳು ನಿರಂಜನ್ ಒಬ್ಬರಿಗೆ ಸೇರಬೇಕು ಎಂಬ ಕಾರಣವನ್ನು

ಬರೆದಿಲ್ಲ. ನಿ.ಡಿ.2 ಅನ್ನು ಬರೆಯುವ ದಿನವನ್ನು ಆಸ್ತಿಗಳ ದಾಖಲೆಯನ್ನು ಜಯಮ್ಮ ರವರು ನನಗೆ ತೋರಿಸಿದ್ದರು. ಆ ಸಮಯದಲ್ಲಿ ಜಯಮ್ಮ ರವರ ಬಾಡಿಗೆ ಮನೆಯಲ್ಲಿ ಬಾಡಿಗೆದಾರರು ವಾಸವಿದ್ದ ಬಗ್ಗ ನಾನು ಗಮನಿಸಲಿಲ್ಲ. ನಿ.ಡಿ.2 ಬರೆದ ದಿನ ಯಾವ ವಾರ ಆಗಿತ್ತು ಎಂದು ನನಗೆ ನೆನಪಿಲ್ಲ. ನಿ.ಡಿ.2 ಬರೆಯಲು ಕಾಗದ ಜಯಮ್ಮ ರವರ ಮನೆಯಲ್ಲಿ ಇತ್ತು. ಪೆನ್ನು ನನ್ನ ಬಳಿ ಇತ್ತು. ನಿ.ಡಿ.2 ಪತ್ರ ಡಬ್ಬಲ್ ಟಾನ್ ಶೀಟ್ ಆಗಿತ್ತೋ ಅಥವಾ ಸಿಂಗಲ್ ಶೀಟ್ ಆಗಿತ್ತೊ ಎಂದು ನನಗೆ ನೆನಪಿಲ್ಲ. ನಿ.ಡಿ.2 ಅನ್ನು ತಯಾರಿಸುವ ಮೊದಲು ನಾನು draft ಅನ್ನು ತಯಾರಿಸಿಲ್ಲ. ನಿ.ಡಿ.2 ಅನ್ನು ಬರೆಯುವಂತೆ ನನಗೆ ತಿಳಿಸಿದಾಗ ಜಯಮ್ಮ ರವರ ಮನೆಯಲ್ಲಿ ಯಾರು ಇರಲಿಲ್ಲ. ಸಾಕ್ಷಿ ಸ್ವತಃ ನಿ.ಡಿ.2 ಅನ್ನು ಬರೆಯುವಂತೆ ಜಯಮ್ಮ ರವರು ಬೇರೆಯವರ ಮೂಲಕ ನನಗೆ ಹೇಳಿ ಕಳುಹಿಸಿದ್ದರು ಎಂದು ನುಡಿಯುತ್ತಾರೆ.

19. ಜಯಮ್ಮ ರವರು ನನಗೆ ಬರುವಂತೆ ತಿಳಿಸಿದವರ ವಯಸ್ಸು 32 ಆಗಿತ್ತು. ಬಂದು ಹೇಳಿದವರು ಮೂಡಿಗೆರೆಯವರಾಗಿದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. ಅವರು ಬಂದು ಹೇಳಿದಾಗ ನಾನು ಪೇಟೆಯಲ್ಲಿ ಇದ್ದೆ. ಬಂದು ಹೇಳಿದವರ ಹೆಸರು, ವಿಳಾಸವನ್ನು ನಾನು ವಿಚಾರಿಸಲಿಲ್ಲ. ಬೆಳಿಗ್ಗ 10.00 ರಿಂದ 11.00 ರ ಒಳಗೆ ಬರಬೇಕು ಎಂದು ನನಗೆ ಹೇಳಿ ಕಳುಹಿಸಿದ್ದರು. ನಿ.ಡಿ.2 ಅನ್ನು ಬರೆಯಲು ಹೋದಾಗ ನನ್ನ ಜೊತೆ ಇಂದ್ರೇಶ್ ರವರು ಒಟ್ಟಿಗೆ ಬಂದಿದ್ದರು. ಶಿವಾನಂದ್ ರವರು 2 ರಿಂದ 3 ನಿಮಿಷ ಮೊದಲೇ ಜಯಮ್ಮ ರವರ ಮನೆಯಲ್ಲಿ ಇದ್ದರು. ಜಯಮ್ಮ ರವರು ದಾಖಲೆಯನ್ನು ನೀಡಿದಾಗ ಇಂದ್ರೇಶ್ ಮತ್ತು ಶಿವಾನಂದ್ ಇದ್ದರು. ಬೆಳಿಗ್ಗ 10.45 ರಿಂದ 11.00 ರ ಸುಮಾರಿಗೆ ನಿ.ಡಿ.2 ಅನ್ನು ಬರೆಯಲು ಆರಂಭಿಸಿದ್ದೆ. ನಿ.ಡಿ.2 ಅನ್ನು ಬರೆಯುವ ಮೊದಲು 2 ರಿಂದ 3 ನಿಮಿಷ ಮಾತನಾಡಿದೆವು. 2 ರಿಂದ 3 ನಿಮಿಷಗಳಲ್ಲಿ ದಾಖಲೆಗಳನ್ನು ನಾನು ನೋಡಿದ್ದೆ. ನಿ.ಡಿ.2 ಅನ್ನು ಬರೆದು ಮುಗಿಸುವಷ್ಟರಲ್ಲಿ 11.45 ರ ಸಮಯ ಆಗಿತ್ತು. ನಿ.ಡಿ.2 ಕ್ಕೆ ಮೊದಲು ನಾನು ಸಹಿ ಮಾಡಿದ್ದೆ, ನಂತರ ಸಾಕ್ಷಿ ಶಿವಾನಂದ ಮಾಡಿದ್ದರು. ನಿ.ಡಿ.2 ರಲ್ಲಿ ಶಿವಾನಂದ್ ರವರ ತಂದೆಯ ಹೆಸರು ಮತ್ತು

ವಿಳಾಸವನ್ನು ನಮೂದಿಸಿದ್ದು ನೆನಪಿಲ್ಲ. ಇಂದ್ರೇಶ್ ರವರ ತಂದೆಯ ಹೆಸರು ಮತ್ತು ವಿಳಾಸವನ್ನು ನಮೂದಿಸಿದ್ದು ನೆನಪಿಲ್ಲ. ದಾಖಲೆಯನ್ನು ಬರೆದವರು ಸಾಕ್ಷಿದಾರರ ತಂದೆಯ ಹೆಸರು ವಿಳಾಸವನ್ನು ಬರೆಯುತ್ತಾರೆ ಎಂದರೆ ಸರಿ.

20. ನಿ.ಡಿ.2 ಕ್ಕೆ ನಾನು ಸಹಿ ಮಾಡಿದಾಗ ನನ್ನ ಹೆಸರು ಮತ್ತು ವಿಳಾಸವನ್ನು ಬರೆದಿದ್ದೇನೆ. ಜಯಮ್ಮ ರವರು ಹೇಳುತ್ತಾ ಇದ್ದ ವಿಚಾರಗಳನ್ನು ನಾನು ಸಾಕ್ಷಿದಾರರಿಗೆ ತಿಳಿಸುತ್ತಾ ನಿ.ಡಿ.2 ಅನ್ನು ಬರೆದಿದ್ದೆ. ನಿ.ಡಿ.2 ಅನ್ನು ಬರೆದ ಬಳಿಕ ಜಯಮ್ಮ ರವರಿಗೆ ನಿ.ಡಿ.2 ರ ವಿಚಾರಗಳನ್ನು ಓದಿ ಹೇಳಲಿಲ್ಲ, ಕಾರಣ ಆಕೆ ತಿಳಿಸಿದಂತೆ ಬರೆದಿದ್ದರಿಂದ ಹೇಳಲಿಲ್ಲ. ನಿ.ಡಿ.2 ದಾಖಲೆ ಬರೆದ ಬಳಿಕ 5 ರಿಂದ 10 ನಿಮಿಷ ಅಲ್ಲಿ ಇದ್ದೆ. ನಿ.ಡಿ.2 ಆದ ಬಳಿಕ ಶಿವಾನಂದ್ ಮತ್ತು ಇಂದ್ರೇಶ್ ಒಟ್ಟಿಗೆ ಹೊರಗೆ ಬಂದೆವು. ನಿ.ಡಿ.2 ಅನ್ನು ಬರೆಸುವಾಗ ಜಯಮ್ಮ ರವರಿಗೆ 70 ವರ್ಷ ದಾಟಿತ್ತು. ಜಯಮ್ಮ ರವರ ಜೊತೆ ಯಾರು ಇರಲಿಲ್ಲ. ಜಯಮ್ಮನ ತಮ್ಮನ ಮನೆ 50 ರಿಂದ 100 ಅಡಿ ದೂರದಲ್ಲಿ ಇದೆ ಎಂದರೆ ಸರಿ. ಜಯಮ್ಮನ ತಮ್ಮನಿಗೆ ಸುಮಾರು ಮಕ್ಕಳು ಇದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಜಯಮ್ಮನ ತಮ್ಮನ ಮಕ್ಕಳು ಬಂದಿರಲಿಲ್ಲ. ನಿ.ಡಿ.2 ಅನ್ನು ಬರೆದ ಬಗ್ಗೆ ಜಯಮ್ಮ ರವರು ಶುಲ್ಕವನ್ನು ನನಗೆ ನೀಡಲಿಲ್ಲ. ಜಯಮ್ಮ ರವರ ಮನೆಯನ್ನು ನಿ.ಡಿ.2 ಅನ್ನು ಬರೆಯುವಾಗ ಯಾವುದೇ ಫಲಹಾರ ಅಥವಾ ಕಾಫಿಯನ್ನು ತೆಗೆದುಕೊಳ್ಳಲಿಲ್ಲ. ಸಾಮಾನ್ಯವಾಗಿ ಯಾರಾದರು ಮನೆಗೆ ಬಂದರೆ ಅವರಿಗೆ ಫಲಹಾರ ಅಥವಾ ಕಾಫಿಯನ್ನು ನೀಡುತ್ತಾರೆ ಎಂದರೆ ಸರಿ. ಜಯಮ್ಮ ರವರು ಹೆಚ್ಚಾಗಿ ಒಂಟಿ ಇರುತ್ತಿದ್ದರಿಂದ ಆಕೆಯ ತಮ್ಮನ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ರವರು ನಿಜವಾಗಿ ನಿ.ಡಿ.2 ಅನ್ನು ಬರೆಸಿದ್ದರೆ ಆಕೆಯ ತಮ್ಮನ ಮಕ್ಕಳನ್ನು ಕರೆಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವೀಲು ನಾಮೆಯ ವಿಚಾರವನ್ನು ಹೊರತುಪಡಿಸಿ ಆರೋಗ್ಯದ ವಿಚಾರ ಮತ್ತು ಇತರೆ ವಿಚಾರಗಳನ್ನು ನಾವು ಆ ದಿನ ಮಾತನಾಡಲಿಲ್ಲ. ನಿ.ಡಿ.2 ಅನ್ನು ಜಯಮ್ಮ ರವರು ನೀಡಿದ ಮಾಹಿತಿ ಮೇರೆಗೆ ಆಕೆಯ ಮನೆಯಲ್ಲಿ ನಾನು ತಯಾರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ

ಸಮಯದಲ್ಲಿ ಇಂದ್ರೇಶ್ ಮತ್ತು ಶಿವಾನಂದ್ ಹಾಜರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.2 ಅನ್ನು ನಾನು ಮತ್ತು ನಿರಂಜನಾ ಸೇರಿ ಜಯಮ್ಮ ರವರು ಮೃತಪಟ್ಟ ಬಳಿಕ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

21. ನಿ.ಡಿ.2 ತಯಾರು ಮಾಡಿದ ಬಳಿಕ ಅದನ್ನು ಜಯಮ್ಮ ರವರ ಕೈಗೆ ನೀಡಿದ್ದೆ. ನಿ.ಡಿ.2 ಅನ್ನು ಒಂದು Envelop ಕವರ್ ನಲ್ಲಿ ಹಾಕಿಕೊಟ್ಟಿದ್ದೆ. ಆ ಕವರ್ ನ ಮೇಲೆ ವಿಳಾಸವನ್ನು ಬರೆಯಲಿಲ್ಲ. ನಿ.ಡಿ.2 ಅನ್ನು ಜಯಮ್ಮ ರವರಿಗೆ ನೀಡುವಾಗ ಶಿವಾನಂದ್ ಹಾಜರಿದ್ದರು. ಕವರ್ ನ ಮೇಲೆ ವೀಲು ನಾಮೆ ಎಂದು ಬರೆಯುವ ಅಗತ್ಯತೆ ಕಂಡು ಬರದ ಕಾರಣ ಮತ್ತು ಜಯಮ್ಮ ರವರು ಅದನ್ನು ಜೋಪಾನ ಮಾಡುತ್ತಾರೆ ಎಂಬ ಕಾರಣದಿಂದ ನಾನು ಕವರ್ ನ ಮೇಲೆ ಬರೆಯಲಿಲ್ಲ.

22. ದಿಃ 10.12.2016 ರಂದು ಜಯಮ್ಮ ರವರು ಅನಾರೋಗ್ಯ ಪೀಡಿತರಾಗಿದ್ದರು ಎಂದರೆ ಸುಳ್ಳು. ಆಕೆಗೆ ಆರೋಗ್ಯ ಸರಿ ಇಲ್ಲ ಕಾರಣ ಆಹಾರವನ್ನು ಆಕೆಯ ತಮ್ಮನ ಮಕ್ಕಳು ತಂದುಕೊಡುತ್ತಿದ್ದರು ಎಂದರೆ ಸುಳ್ಳು. ಡಿಸೆಂಬರ್ 2016 ರ ಕೊನೆಯಲ್ಲಿ ಜಯಮ್ಮ ರವರ ಅನಾರೋಗ್ಯ ಉಲ್ಬಣಿಸಿತ್ತು ಎಂದರೆ ಸರಿಯಲ್ಲ. ಜಯಮ್ಮ ರವರನ್ನು ನಾನು ಆ ಸಮಯದಲ್ಲಿ ಕಾರಿಗೆ ಹಾಕಿ ಚಿಕ್ಕಮಗಳೂರಿಗೆ ಕಳುಹಿಸಿಕೊಟ್ಟಿದ್ದೆ ಎಂದರೆ ಸಾಕ್ಷಿ 2 – 3 ತಿಂಗಳ ಬಳಿಕ ಮೂಡಿಗೆರೆ ಆಸ್ಪತ್ರೆಗೆ ಕಾರಿನಲ್ಲಿ ಕಳುಹಿಸಿದ್ದೆ ಎಂದು ನುಡಿಯುತ್ತಾರೆ. ಡಿಸೆಂಬರ್ 2016 ರ ಕೊನೆಯಲ್ಲಿ ಜಯಮ್ಮ ರವರನ್ನು ಚಿಕ್ಕಮಗಳೂರಿನ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಚಿಕ್ಕಮಗಳೂರಿನ ಆಸ್ಪತ್ರೆ ಯಲ್ಲಿ ದಾಖಲಾದ ಜಯಮ್ಮ ರವರು ಗುಣಮುಖರಾಗದೇ ನಂತರ ಅವರ ಮೃತದೇಹವನ್ನು ಚಿಕ್ಕಮಗಳೂರಿನಿಂದ ಮೂಡಿಗೆರೆಗೆ ತರಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ದಿಃ 10.12.2016 ರಂದು ಜಯಮ್ಮ ರವರು ಅನಾರೋಗ್ಯದಿಂದ ಕೂಡಿದ್ದು, ವೀಲು ನಾಮೆ ಬರೆಸುವ ಬುದ್ಧಿಶಕ್ತಿ ಆಕೆಗೆ ಇರಲಿಲ್ಲ ಎಂದರೆ ಸುಳ್ಳು. ಜಯಮ್ಮ ರವರು ಮರಣಹೊಂದುವ ಪೂರ್ವದ ದಿನಾಂಕವನ್ನು ನಮೂದಿಸಿ ನಿ.ಡಿ.2 ಅನ್ನು

ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಜಯಮ್ಮ ರವರು ಎಷ್ಟು ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದು ನನಗೆ ಗೊತ್ತಿಲ್ಲ. ಜಯಮ್ಮ ರವರಿಗೆ ಪಾಶ್ವವಾಯು ಆಗಿ ಮಾತು ಮತ್ತು ಬರವಣಿಗೆ ನಿಂತು ಹೋದ ಕಾರಣ ಆಕೆಯನ್ನು ಚಿಕ್ಕಮಗಳೂರು ಆಸ್ಪತ್ರೆಗೆ ದಾಖಲಿಸಿದ್ದರು ಎಂದರೆ ಸುಳ್ಳು. ನಿ.ಡಿ.2 ಅನ್ನು ನಾನು ಮತ್ತು ನಿರಂಜನ್ ಸೇರಿ ಸೃಷ್ಟಿಸಿ ಅದನ್ನು ನಿರಂಜನ್ ರವರ ಕೈಗೆ ನೀಡಿದ್ದೆ ಎಂದರೆ ಸುಳ್ಳು. ನಿ.ಡಿ.2 ಅನ್ನು ತಯಾರಿಸಿದ ಎಷ್ಟು ತಿಂಗಳ ಬಳಿಕ ಜಯಮ್ಮ ರವರು ಮೃತಪಟ್ಟರು ಎಂದು ಹೇಳಲು ಆಗುವುದಿಲ್ಲ. ಜಯಮ್ಮ ರವರು ಎಲ್ಲಿ ಮೃತಪಟ್ಟರು ಎಂದು ನನಗೆ ಮಾಹಿತಿ ಇಲ್ಲ. ದಿಃ 08.02.2017 ರಂದು ಜಯಮ್ಮ ರವರು ಮೃತಪಟ್ಟಿದ್ದಾರೆ ಎಂದರೆ ಇರಬಹುದು. ಜಯಮ್ಮ ರವರು ಆಸ್ಪತ್ರೆಗೆ ಸೇರಿದ ದಿನಾಂಕ ಮತ್ತು ಮರಣ ಪ್ರಮಾಣ ಪತ್ರವನ್ನು ನೋಡಿ ಅದಕ್ಕೆ ಪೂರಕವಾದ ದಿನಾಂಕವನ್ನು ನಮೂದಿಸಿ ಜಯಮ್ಮ ಮರಣ ಹೊಂದಿದ ಬಳಿಕ ನಿ.ಡಿ.2 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ.2 ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ